# ಶ್ರೀವಾದಿರಾಜರು ರಚಿಸಿರುವ ಕೃತಿಗಳು

ಮ.ಭಾ.ತಾ.ನಿರ್ಣಯಭಾವಪ್ರಕಾಶಿಕಾ
ಮಹಾಭಾರತಲಕ್ಷಾಲಂಕಾರ
ತೈತ್ತಿರೀಯೋಪನಿಷದ್ಭಾಷ್ಯಟೀಕಾ
ತಲವಕಾರೋಪನಿಷದ್ಭಾಷ್ಯಟೀಕಾ
ಆಥರ್ವಣೋಪನಿಷದ್ಭಾಷ್ಯಟೀಕಾ
ಕಾಠಕೋಪನಿಷದ್ಭಾಷ್ಯಟೀಕಾ
ಮಾಂಡೂಕೋಪನಿದ್ಭಾಷ್ಯಟೀಕಾ
ತಂತ್ರಸಾರಟೀಕಾ
ಸನತ್ಸುಜಾತೀಯವ್ಯಾಖ್ಯಾನ
ಪುರುಷಸೂಕ್ತವ್ಯಾಖ್ಯಾನ
ನ್ಯಾಯಸುಧಾಗುರ್ವರ್ಥದೀಪಿಕಾ
ತತ್ತ್ವಪ್ರಕಾಶಿಕಾಗುರ್ವರ್ಥದೀಪಿಕಾ
ಈಶಾವಾಸ್ಯೋಪನಿಷದ್ಭಾಷ್ಯಟಿಪ್ಪಣಿ
ಷಟ್ಪ್ರಶ್ನೋಪನಿಷದ್ಭಾಷ್ಯಟೀಕಾಟಿಪ್ಪಣಿ
ಗೀತಾಭಾಷ್ಯಟಿಪ್ಪಣಿ
ಪ್ರಮಾಣಪದ್ಧತಿ ಟಿಪ್ಪಣಿ
ಯುಕ್ತಿಮಲ್ಲಿಕಾ
ನ್ಯಾಯರತ್ನಾವಲೀ
ಚಕ್ರಸ್ತುತಿ
ಉಪನ್ಯಾಸರತ್ನಮಾಲಾ
ಹರಿಭಕ್ತಿಲತಾ
ಶ್ರುತಿತತ್ತ್ವಪ್ರಕಾಶಿಕಾ
ಸದಾಚಾರಸ್ಮೃತಿ
ಸಂಕಲ್ಪಪದ್ಧತಿ
ಏಕಾದಶೀನಿರ್ಣಯ
ಭೂಗೋಲನಿರ್ಣಯ
ತಾರತಮ್ಯ
ಚಿಂತಾಖಂಡನ
ಪಾಷಂಡಖಂಡನವ್ಯಾಸಸ್ತೋತ್ರ
ಪಾಷಂಡಮತಖಂಡನ
ಕಲ್ಪಲತಾ
ವಿವರಣವ್ರಣ
ಶಕುನಮಾಲಾ
ಮುಹೂರ್ತರಾಜ
ಮಾಧ್ವವಾಗ್ವಜ್ರಾವಲಿ
ಸಂಸ್ಕೃತ(ಬ್ರಹ್ಮ)ಸೂತ್ರಾರ್ಥ
ನಯಸಿದ್ಧಾಂತಸಂಗ್ರಹ
ಅಧಿಕರಣನಾಮವಲಿ
ಶ್ರೀಮದ್ಭಾಗವತಾನುಕ್ರಮಣಿಕಾ
ವಾಯುಸ್ತುತಿಪುರಶ್ಚರಣವಿಧಿ
ರುಗ್ಮಿಣೀಶವಿಜಯ
ತೀರ್ಥಪ್ರಬಂಧ
ಸರಸಭಾರತೀವಿಲಾಸ
ಕವಿಕದಂಬಕಂಠಭೂಷಾ
ಭಾಗವತಸಂಗ್ರಹ
ಸನತ್ಸುಜಾತೀಯವ್ಯಾಖ್ಯಾನ
ರಮೇಶಸ್ತುತಿ
ವಿಷ್ಣುಸ್ತುತಿ
ದಶಾವತಾರಸ್ತೋತ್ರ
ದಶಾವತಾರಸ್ತುತಿ
ಚತುರ್ವಿಂಶತಿ ಮೂರ್ತಿಸ್ತೋತ್ರ
ವರಾಹಹಯವದನ ಸ್ತೋತ್ರ

| | |
|---|---|
| ವರಾಹಪಂಚಕ | ನರಹರ್ಯಷ್ಟಕ |
| ತ್ರಿವಿಕ್ರಮಸ್ತೋತ್ರ | ಶ್ರೀರಾಮದಶಕ |
| ಶ್ರೀರಾಮಪಂಚಕ | ಶ್ರೀರಾಮಕವಚ |
| ರೂಪ್ಯಪೀಠಕೃಷ್ಣಸ್ತುತಿ | ಶ್ರೀಕೃಷ್ಣಸ್ತವ |
| ಶ್ರೀಕೃಷ್ಣಸ್ತುತಿ | ಅಷ್ಟಮಹಿಷೀಕೃತಕೃಷ್ಣಸ್ತುತಿ |
| ಶ್ರೀಕೃಷ್ಣಸ್ತೋತ್ರ | ಶ್ರೀಕೃಷ್ಣ ಆಪಾದಸ್ತೋತ್ರ |
| ಹರ್ಯಷ್ಟಕ | ಹಯಾಸ್ಯದಶಕ |
| ಹಯವದನಾಷ್ಟಕ | ಹಯಾಸ್ಯನುತಿಪಂಚಕ |
| ಹಯಗ್ರೀವಧ್ಯಾನಪ್ರಕರಣ | ಹಯಗ್ರೀವಸ್ತುತಿ |
| ಹಯಗ್ರೀವಸಂಪದಾಸ್ತೋತ್ರ | ಹಯಗ್ರೀವಸ್ತೋತ್ರ |
| ಶ್ರೀಹಯಗ್ರೀವಸ್ತೋತ್ರ | ಶ್ರೀವೇದವ್ಯಾಸಾಷ್ಟಕ |
| ಶ್ರೀವ್ಯಾಸವರ್ಣನ | ವೇಂಕಟೇಶಸ್ತುತಿಃ |
| ವೇಂಕಟೇಶಮಂಗಲಾಷ್ಟಕ | ಅಕ್ಷಪಂಚಕ |
| ಉಕ್ತಿಪ್ರತ್ಯುಕ್ತಿಸ್ತೋತ್ರ | ಧೀಶುದ್ಧಿಸ್ತೋತ್ರ |
| ಪ್ರಾರ್ಥನಾದಶಕ | ದೇವತಾಹ್ವಾನಪ್ರಕಾರ(ಗದ್ಯ) |
| ಶ್ಲೋಕತ್ರಯ(ನೈವೇದ್ಯವಿಧಿ) | ಪರಮಸ್ತುತಿ |
| ಋಣಮೋಚನಸ್ತೋತ್ರ | ಸ್ವಪ್ನಪದ್ಯ |
| ಸಪ್ತರಾತ್ರೋತ್ಸವಪ್ರಕಾರ | ಅಭಯಸಂಸ್ತವ |
| ಶ್ರೀಶ್ರೀಶಗುಣದರ್ಪಣ | ಲಕ್ಷ್ಮ್ಯಾಯರ್ಯಾವೃತ್ತ |
| ದುರ್ಗಾಸ್ತವ | ಅವತಾರತ್ರಯಸ್ತೋತ್ರ |
| ಮಧ್ವಾಷ್ಟಕ | ವಾಯುಸ್ತುತಿ |
| ಮಧ್ವಮುನಿಪ್ರತಾಪಾಷ್ಟಕ | ನವಗ್ರಹಸ್ತೋತ್ರ |
| ಶ್ರೀಪಾದರಾಜಷಟ್ಕ | ಸಹಸ್ರಾರಸ್ತುತಿ(ಚಕ್ರಸ್ತುತಿ) |
| ಕುರುಸ್ತುತಿ | ಹರಿಭಕ್ತಾಷ್ಟಕ |
| ಶ್ರೀಕೃಷ್ಣರಾಮಾವತಾರಚರಿತರತ್ನಸಂಗ್ರಹ | ಶ್ರೀವೇಂಕಟೇಶಸ್ತೋತ್ರ |
| ವೈಕುಂಠವರ್ಣನೆ | ನೈವೇದ್ಯಪ್ರಕರಣ |
| ಲಕ್ಷ್ಮೀಶೋಭನ | ಅವತಾರತ್ರಯಸುವಾಲಿ |
| ಸ್ವಪ್ನಪದ | ನೂರಾರು ದೇವರನಾಮಗಳು |
| ಗುಂಡಕ್ರಿಯೆ | ಉಗಾಭೋಗಗಳು |
| ಭ್ರಮರಗೀತೆ | ಸುಳಾದಿಗಳು |

ನಮಸ್ಕಾರಸ್ತೋತ್ರ
ಕೇಶವನಾಮ
ಶ್ರೀಕೃಷ್ಣಬಾಲಲೀಲೆ
ರಾಗಮಾಲಿಕೆ

# ನಾರಾಯಣನ ನೆನೆ ವರ್ಣಿಸು ಮನ್ನಿಸು

ನಾರಾಯಣನ ನೆನೆ ವರ್ಣಿಸು ಮನ್ನಿಸು
ಆರಾಧನೆಗಳ ಮಾಡುತ ಪಾಡುತ
ನೀರಾಜನದಿಂದಲರ್ಚಿಸಿ ಮೆಚ್ಚಿಸಿ ವೇದ
ಪಾರಾಯಣಪ್ರಿಯನ ॥ಪ॥
ಅವನ ಶ್ರವಣ ಮನನ ನಿಧಿಧ್ಯಾಸನ
ಶ್ರೀವಿಷ್ಣುವಿನ ಭಕ್ತಿಮಹಾಪ್ರಸಾದಂಗಳು
ಕೈವಲ್ಯ ಪದಕಿಕ್ಕಿದ ನಿಚ್ಚಣಿಕೆ ಎಂದು ಭಾವಜ್ಞರು ಪೇಳ್ವರೊ
ಜೀವನ ಜವನಬಾಧೆಯ ತಪ್ಪಿಸಿ
ಪಾವನ ವೈಕುಂಠಪುರದೊಳಗೆಂದೆಂದು
ಆವಾಸವನು ಮಾಡಿ ಸುಖಿಸಬೇಕಾದರೆ ಸೇವಿಸು ವೈಷ್ಣವರ ॥೧॥
ಲೋಕದಿ ವರಂ ವರಯ ಭದ್ರಂತೆ
ಋತೆ ಕೈವಲ್ಯಮಾತ್ಮನಃ
ಏಕಮೇವೇಶ್ವರಸ್ತಸಾದ್ಭಗವಾನ್ ವಿಷ್ಣುರವ್ಯಯ ಎಂಬಾ
ಈ ಕಲಿಯುಗದಲಿ ಬೇಕಾದ ಪುರಾಣಾದಿ
ವಾಕುವಿವೇಕವ ಮನದಿ ವಿಚಾರಿಸಿ
ಸ್ವೀಕರಿಸು ವೈಷ್ಣವ ಮತವ ಜೀವ ನಿರಾಕರಿಸನ್ಯಮತವ ॥೨॥
ದ್ವಾರಾವತಿಯ ಗೋಪಿಚಂದನದಿಂದ
ಶ್ರೀರಮಣನ ವರ ನಾಮವ ನೆನೆದೆರಡಾರೂರ್ಧ್ವ
ಪುಂಡ್ರಗಳ
ಧರಿಸೆಂದೆಂದು ವೀರವೈಷ್ಣವಗುರುವ
ಸೇರಿ ಸಂತಪ್ತಸುದರುಶನ ಶಂಖ
ಧಾರಣವನು ಭುಜಯುಗದಲಿ ಮಾಡಿ
ಮುರಾರಿಯ ಮಂತ್ರಗಳವರಿಂದ ಕೇಳುತ ಓರಂತೆ ಜಪಿಸುತ್ತಿರು ॥ ೩॥
ಹರಿ ನಿರ್ಮಾಲ್ಯವ ಶಿರದಿ ಧರಿಸುತಿರು
ಹರಿ ನೈವೇದ್ಯವನೆ ಭುಂಜಿಸುತಿರು
ಇರುಳು ಹಗಲು ಹರಿಸ್ಮರಣೆಯ
ಬಿಡದಿರು ದುರುಳರ ಕೂಡದಿರೊ
ಹರಿಪದ ತೀರ್ಥದ ನೇಮವಬಿಡದಿರು
ಹರಿಪರದೇವತೆ ಎಂದರುಪುತಲಿರು
ಗುರುಮುಖದಿಂದ ಸಚ್ಛಾಸ್ತ್ರಪುರಾಣವ ನಿರುತದಿ ಕೇಳು ॥೪॥
ತುಷ್ಟನಹನು ಎಳ್ಳಷ್ಟು ಮುಂದಿಟ್ಟರೆ

ಅಷ್ಟಿಷ್ಟೆನ್ನದೆ ಸಕಲೇಷ್ಟಂಗಳ
ಕೊಟ್ಟುಕಾಯ್ವನು ಶಕ್ರನಿಗೆ ತ್ರಿವಿಷ್ಟಪಪಟ್ಟವ ಕಟ್ಟಿದವ
ದುಷ್ಟರನೊಲ್ಲ ವಿಶಿಷ್ಟರಿಗೊಲಿವ ಅ-
ನಿಷ್ಟವ ತರಿದೊಟ್ಟುವ ಜಗಜಟ್ಟಿ ಅರಿಷ್ಟ
ಮುಷ್ಟಿಕಾದ್ಯರ ಹುಡಿಗುಟ್ಟಿದ ವಿಠಲ ಬಹು ದಿಟ್ಟ ॥೫॥
ಕಂದ ಬಾಯೆಂದರೆ ನಂದನಿಗೊಲಿದಿಹ
ಕುಂದುಕೊರತೆ ಬಂದರೆ ನೊಂದುಕೊಳನು
ಇಂದಿರೆಯರಸ ಮುಕುಂದ ಮುಕುತಿಯ ನಂದನವನೀವ ದೇವ
ಸಂದೇಹವಿಲ್ಲದೆ ಒಂದೆಮನದಿ ಸ-
ನಂದನಾದಿಗಳು ಭಜಿಸಲು ಒಲಿವ ಉ-
ಪೇಂದ್ರನ ಶುಭಗುಣಸಾಂದ್ರನ ಯದು
ಕುಲಚಂದ್ರನ ವಂದಿಸಿರೊ ॥೬॥
ಓಡುವ ಆಡಗುವ ದೇವರೆ ಬಲ್ಲರು
ಬಾಡುವ ಬೇಡುವ ಮುನಿಗಳೆ ಬಲ್ಲರು
ನೋಡುವ ಕೂಡುವ ಮುಕುತರೆ ಬಲ್ಲರೊಡನಾಡುವ ರಮೆ ಬಲ್ಲಳು
ಊಡುವ ಪಾಡುವ ಯಶೋದೆ ಬಲ್ಲಳು
ಕಾಡುವ ಖಳರ ಮರ್ದಿಸಿ ಹುಡಿಗುಟ್ಟಿದ
ನಾಡೊಳು ಕೇಡುಗಳೆವ ಕೃಷ್ಣನಿಗೀಡೆಂದಾಡದಿರು ॥೭॥
ಆವನ ಪಕ್ಷವದಕೆದುರಿಲ್ಲ
ಆವನ ಕುಕ್ಷಿಯೊಳಕ್ಕು ಜಗತ್ರಯ
ಆವನು ಶಿಕ್ಷಿಪ ರಕ್ಷಿಪನು ಮ
ತ್ತಾವನು ಪಾವನನು
ಆವನ ಶಿಕ್ಷೆಯ ಮಿಕ್ಕವರಿಲ್ಲ ಕೇ-
ಳಾವನುಪೇಕ್ಷೆ ಕುಲಕ್ಷಯವೆನಿಪುದು
ಆವನುರುಕ್ರಮ ವಿಕ್ರಮನೆನಿಸಿದ ದೇವನಿಗಾವನೆಣೆ ॥೮॥
ಸಿರಿದೇವಿ ಆವನಿಗರಸಿ ಸುರರ ಗುರು
ವಿರಿಂಚಿ ಪವನರು ಆವನ ಕುವರರೆಂಬರು
ಉರಗಾಧಿಪನಾವನ ಮಂಚ ವಿಹಗೇಶ್ವರನಾವನ ವಾಹನ
ಪುರಹರನಾವನುಂಗುಟನೀರಪೊತ್ತನಿ-
ರ್ಜರ ಪತಿ ಆವನ ಚರಣಸೇವಕನಾದ
ಸುರರೊಳಗೀ ಹಯವದನಗಿನ್ನಾರನು ಸರಿಯೆಂದುಸುರುವೆನೊ ॥೯॥